O.S. 206/2015

P.W.1

<u>ಸಾಕ್ಷಿಯನ್ನು ದಿನಾಂಕಃ 13-02-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಕೆ.ಎಸ್.ಬಿ. ವಕೀಲರವರಿಂದಃ**

**ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ನನ್ನ ಕೇಸಿಗೆ ಪೂರಕವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವೆನು. ಸಾಕ್ಷಿಯು ಹಾಜರುಪಡಿಸಿದ ಹಾಗೂ ನ್ಯಾಯಾಲಯವು ನಿಶಾನೆಗೊಳಿಸಿರುವ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.**

ನಿಪಿ-21 ದೃಢೀಕೃತ ಖರೀದಿಪತ್ರ

ನಿಪಿ-22 ದೃಢಿಕೃತ ಸವರ್ಣ ಅಥವಾ ತಿದ್ದುಪಡಿ ಪತ್ರ

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ ಶ್ರೀ.ಕೆ.ಎಂ.ವಕೀಲರವರಿಂದಃ**

ಈ ದಾವೆ ಸಲ್ಲಿಸಲು ವಕೀಲರಿಗೆ 10 ಜನ ಸೇರಿ ಮಾಹಿತಿ ನೀಡಿದ್ದೆವೆ. ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ಪ್ರಮಾಣಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೋತ್ತಿದೆ. 18 ನೇ ಪ್ರತಿವಾದಿ ನನ್ನ ಖಾಸ ಅಣ್ಣ. 19 ನೇ ಪ್ರತಿವಾದಿ 18 ನೇ ಪ್ರತಿವಾದಿಯ ಹೆಂಡತಿ. ನನ್ನ ಸಹೋದರ 18 ನೇ ಪ್ರತಿವಾದಿ ಇಶಾಸಾಬ್ ರವರ ವಿರುದ್ಧ ಆಸ್ತಿ ನೊಂದಾವಣೆ ಮಾಡಿಕೊಡಬೇಕು ಎಂದು ದಾವೆಯನ್ನು ಈ ನ್ಯಾಯಾಲಯದಲ್ಲಿ ಹಾಕಿದ್ದೇನೆ ಎಂದರೆ ಸರಿ. ಆ ದಾವೆಯನ್ನು ಹರಪನಹಳ್ಳಿ ನಗರದ ಮನೆಯ ಸಂಬಂದ ಮತ್ತು ಇನ್ನೊಂದು ಅರಸಿಕೆರೆ ಗ್ರಾಮದ ಸರ್ವೆ ನಂ.315 ಕ್ಷೇತ್ರ 3 ಎಕರೆ 64 ಸೆಂಟ್ಸ್ ಗೆ ಸಂಬಂದಿಸಿದಂತೆ ಹಾಕಿರುತ್ತೇನೆ. ಆ ದಾವೆಯನ್ನು 2015 ನೇ ಸಾಲಿನಲ್ಲಿ ಸಲ್ಲಿಸಿದ್ದೆನು. ಈ ದಾವೆಯನ್ನು ಸದರಿ ದಾವೆಯನ್ನು ಸಲ್ಲಿಸುವ ಮೊದಲೇ ಹಾಕಿದ್ದೇನೆ ಎಂದರೆ ನನಗೆ ನೆನಪಿರುವುದಿಲ್ಲ. ಈ ಕೇಸು ಮತ್ತು ಆಸ್ತಿನೊಂದಣಿ ಕೇಸು ಹೋರತು ಪಡಿಸಿ ನಾನು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 18 ನೇ ಪ್ರತಿವಾದಿಯ ವಿರುದ್ಧ ಹಾಕಿದ್ದೇನೆ ಎಂದರೆ ಸರಿಯಲ್ಲ. ಬಿ.ಎ.ರೇಹಮಾನ್ ಇವರು ನನ್ನ ಸಹೋದರನ ಪತ್ನಿ. ಉಮರ್ ಸಾಬ್ ನನ್ನ ಹಿರಿಯ ಸಹೋದರ. ಫಸುಲ್ ರೆಹಮನ್ ಇವರು ನನ್ನ 2 ನೇ ಸಹೋದರ. ಮೇಲೆ ಹೇಳಿದ ನನ್ನ ಅಣ್ಣನ ಪತ್ನಿಯಾದ ಬಿ ಅಂತೂರ್ ರೆಹಮಾನ್ ಇವರು ಮತ್ತು ಇತರರು ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ.37/2012 ರಂತೆ ಪಾಲುವಿಭಾಗ ದಾವೆಯನ್ನು ಇ.ಸಬಿರಾ ಬೀ ಮತ್ತು ಇತರ 22 ಜನರ ವಿರುದ್ಧ ಹಾಕಿದ್ದರು ಎಂದರೆ ಸರಿ. ಸದರಿ ಅಂತುಾರ್ ರೆಹಮಾನ್ ಮತ್ತು ಇ.ಸಬಿರಾ ಬೀ ಈ ದಾವೆಯಲ್ಲಿ

ಪಕ್ಷಕಾರರು ಇರುತ್ತಾರೆ ಎಂದರೆ ಸರಿ. ಈ ಮೊದಲು ಹಾಕಿದ್ದ ದಾವೆಯನ್ನು ಹಿಂದಕ್ಕೆ ಪಡೆದಿರುತ್ತೇವೆ ಎಂದು ವಾದಪತ್ರದಲ್ಲಿ ಹೇಳಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

13-02-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**